# ಕರ್ನಾಟಕ ಸರ್ಕಾರ

ಸಂಖ್ಯೆ: **ಎಫ್‌ಇಇ 128 ಎಫ್‌ಎಲ್‌ಎಲ್ 2025 (ಇ)**

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:**10.03.2026.**

**ಇವರಿಂದ:**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

**ಇವರಿಗೆ:**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಅರಣ್ಯ ಸಂರಕ್ಷಣೆ),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

**ಮಾನ್ಯರೆ,**

**ವಿಷಯ:** Diversion of 0.1232 ha of forest land in Sringeri Taluk of Chikkamagalur District (Koppa Forest Division) for laying of OFC within the existing RoW in favour of NH-PWD road from Samshi to Kalasa in Chikkamagalur District in favour of JIO Digital Fibre Private Limited, Bengaluru.
**(Proposal no: FP/KA/OFC/153126/2022)**

**ಉಲ್ಲೇಖ:** 1. ಇದೇ ಸಮಸಂಖ್ಯೆಯ ಆದೇಶ ದಿನಾಂಕ: 18.11.2025.
2. ತಮ್ಮ ಕಚೇರಿಯ ಪತ್ರ ದಿನಾಂಕ: 03.02.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರ ಪತ್ರದಲ್ಲಿ ಅರಣ್ಯ ತಿರುವಳಿಗೆ ಕೇಂದ್ರ ಸರ್ಕಾರದ MOEF ಇಲಾಖೆಗೆ ಕಳುಹಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಅದರಂತೆ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಪ್ರಸ್ತುತ ಪ್ರಸ್ತಾವನೆಯೂ ರಸ್ತೆ ಬದಿ (ROW) OFCನ್ನು ಅಳವಡಿಸುವ ಬಗ್ಗೆ ಇದ್ದುದರಿಂದ ವನ (ಸಂರಕ್ಷಣ ಏವಂ ಸಂವರ್ದನ) ಅಧಿನಿಯಮ, 1980 ಮತ್ತು ವನ (ಸಂರಕ್ಷಣ ಏವಂ ಸಂವರ್ದನ) ನಿಯಮ, 2023ರ ಮಾರ್ಗಸೂಚಿಯ Chapter 4 ರ ಪ್ಯಾರ 4.2 ರನ್ವಯ ಸದರಿ ಪ್ರಸ್ತಾವನಗೆ ರಾಜ್ಯ ಸರ್ಕಾರದ ಹಂತದಲ್ಲಿಯೇ ಆದೇಶವನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖಿತ(2)ರ ಪತ್ರದಲ್ಲಿ ಪ್ರಸ್ತುತ ಪ್ರಸ್ತಾವನೆಯೂ ತಾಂತ್ರಿಕ ಕಾರಣದಿಂದ ಉಪಯೋಗಿ ಸಂಸ್ಥೆಗೆ ಬೇಡಿಕೆ ಸೂಚನೆಯ (demand notice) ನೀಡಲು ಸಾಧ್ಯವಾಗುತ್ತಿಲ್ಲವಾಗಿ ಪ್ರಸ್ತಾಪಿಸಿ ಸರ್ಕಾರದ ಹಂತದಲ್ಲಿ ಸರಿಪಡಿಸುವಂತೆ ಕೋರಿರುವುದಾಗಿದೆ. ವಾಸ್ತವಾಗಿ ಈ ಪ್ರಸ್ತಾವನೆಯನ್ನು ಪರಿವೇಶ್ ಪೋರ್ಟಲ್‌ನಲ್ಲಿ ಅಳವಡಿಸುವ (upload) ಸಂದರ್ಭದಲ್ಲಿ ಕೇಂದ್ರ ಸರ್ಕಾರದ MOEF ಇಲಾಖೆಗೆ ಕಳುಹಿಸಲು Scenerioನ್ನು ಆಯ್ಕೆ ಮಾಡಲಾಗಿರುತ್ತದೆ. ಆದರೆ, ಈ ಪ್ರಸ್ತಾವನೆಗೆ ರಾಜ್ಯ ಸರ್ಕಾರದ ಹಂತದಲ್ಲಿಯೇ ಅನುಮೋದನೆ ನೀಡಿರುವುದಿರಂದ ಪರಿವೇಶ್ ವೆಬ್ ಪೋರ್ಟ್‌ನಲ್ಲಿ ಮುಂದುವರೆಯಲು ತಾಂತ್ರಿಕ ಸಮಸ್ಯೆಯಾಗಿರುವುದಾಗಿ ಕಂಡು ಬರುತ್ತದೆ.

ಆದುದರಿಂದ, ಈ ಪ್ರಸ್ತಾವನೆಯನ್ನು ಪರಿವೇಶ್ ವೆಬ್ ಪೋರ್ಟ್‌ನಲ್ಲಿ ಅಳವಡಿಸುವ (upload) ಸಂದರ್ಭದಲ್ಲಿ ಕೇಂದ್ರ ಸರ್ಕಾರದ MOEF ಇಲಾಖೆಗೆ ಕಳುಹಿಸುವ ಸನ್ನಿವೇಶ (Scenerio) ಬದಲು ರಾಜ್ಯ ಸರ್ಕಾರದ ಅನುಮೋದನೆ ನೀಡಲು ಇರುವ ಸನ್ನಿವೇಶ (Scenerio) ನ್ನು ಆಯ್ಕೆ ಮಾಡಿದ್ದಲ್ಲಿ ತಾಂತ್ರಿಕ ಸಮಸ್ಯೆಯೂ ನಿವಾರಣೆಯಾಗುತ್ತದೆ. ಪ್ರಸ್ತುತ ಪ್ರಸ್ತಾವನೆಯನ್ನು ಸನ್ನವೇಶ (Scenerio) ನ್ನು ಬದಲಾಯಿಸಲು ಪ್ರ.ಮು.ಅ.ಸಂರವರಿಗೆ ಸಾಧ್ಯವಿರುವುದರಿಂದ ಅದರಂತೆ, ತಮ್ಮ ಹಂತದಲ್ಲಿ ಮುಂದಿನ ಕ್ರಮವಹಿಸುವಂತೆ ಈ ಮೂಲಕ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಬಿ. ಶಿ

**(ಬಿ.ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಸಿ ಮತ್ತು ಸಮನ್ವಯ)